# ಸಂಧಿ ೨೬ – ಅವರೋಹಣ ತಾರತಮ್ಯ ಸಂಧಿ

**ಹರಿಕಥಾಮೃತಸಾರ ಗುರುಗಳ........ ॥ ಪ ॥**

**ಶ್ರೀರಮಣ ನಿಜಭಕ್ತರೆನಿಸುವ**
**ವಾರಿಜಾಸನ ಮುಖ್ಯನಿರ್ಜರ**
**ತಾರತಮ್ಯವಪೇಳ್ವೆ ಸಂಕ್ಷೇಪದಲಿ ಗುರುಬಲದಿ ॥**

**ಸೂಚನೆ:–** ತಾರತಮ್ಯ ವಿಷಯವನ್ನು ಹಿಂದೆ ಬೃಹತ್ತಾರತಮ್ಯ ಸಂಧಿಯಲ್ಲೂ, ಗುಣ ತಾರತಮ್ಯ ಸಂಧಿಯಲ್ಲೂ ವಿವರವಾಗಿ ವ್ಯಾಖ್ಯಾನ ಮಾಡಿರುವುದರಿಂದ ಈ ಸಂಧಿಯಲ್ಲಿ ತಾತ್ಪರ್ಯವು ಮಾತ್ರ ಬರೆಯಲ್ಪಡುತ್ತೆ.

**ತಾತ್ಪರ್ಯ:–** ಲಕ್ಷ್ಮೀಪತಿಯಾದ ಶ್ರೀಪರಮಾತ್ಮನ ನಿಜ ಭಕ್ತರಾದ ಬ್ರಹ್ಮ ದೇವರು ಮೊದಲಾದ ದೇವತೆಗಳ ತಾರತಮ್ಯವನ್ನು ಗುರು ಕೃಪಾ ಕಟಾಕ್ಷದಿಂದ ಸಂಕ್ಷೇಪವಾಗಿ ಪೇಳುವೆನು. ಎಂದು ಸಂಧಿಯ ಅಭಿಪ್ರಾಯವನ್ನು ಸೂಚಿಸಿರುತ್ತಾರೆ.

**ಕೇಶವಗೆ ನಾರಾಯಣಿಗೆ ಕಮ**
**ಲಾಸನ ಸಮೀರ ವಾಣಿಗೆ**
**ವೀಶಫಣಿಪ ಮಹೇಶರಿಗೆ ಷಣ್ಮಹಿಷಿಯರಪದಕೆ ॥**
**ಶೇಷರುದ್ರರಪತ್ನಿಯರಿಗೆ ಸು**
**ವಾಸವಪ್ರದ್ಯುಮ್ನರಿಗೆ ಸಂ**
**ತೋಷದಲಿವಂದಿಸುವೆ ಭಕ್ತಿಜ್ಞಾನಕೊಡಲೆಂದು ॥ ೧ ॥**

**ತಾತ್ಪರ್ಯ:–** ಶ್ರೀಮನ್ನಾರಾಯಣ ದೇವರಿಗೂ, ಅವನ ಪತ್ನಿಯರಾದ ಲಕ್ಷ್ಮೀದೇವಿಯರಿಗೂ, ಬ್ರಹ್ಮ ವಾಯುಗಳಿಗೂ, ಸರಸ್ವತೀ ಭಾರತಿಯರಿಗೂ, ಗರುಡ, ಶೇಷ ರುದ್ರ, ಕೃಷ್ಣನ ಷಣ್ಮಹಿಷಿಯರು ಇವರುಗಳ ಪಾದ ಕಮಲಗಳಿಗೂ ಸೌಪರ್ಣಿ ವಾರುಣೀ, ಪಾರ್ವತಿಯರಿಗೆ, ಇಂದ್ರ ಕಾಮರಿಗೆ ಭಕ್ತಿ ಜ್ಞಾನ ಕೊಡಲೆಂದು ಸಂತೋಷದಿಂದ ನಮಸ್ಕರಿಸುವೆನು.

**ಪ್ರಾಣದೇವಗೆನಮಿಪೆ ಕಾಮನ**
**ಸೂನುಮನುಗುರುದಕ್ಷಶಚಿ ರತಿ**
**ಮಾನಿನಿಯರಿಗೆ ಪ್ರವಹದೇವಗೆ ಸೂರ್ಯ ಸೋಮ ಯಮ ॥**
**ಮಾನವಿಗೆ ವರುಣನಿಗೆ ವೀಣಾ**
**ಪಾಣಿ ನಾರದಮುನಿಗೆ ನಮಿಸುವೆ**
**ಜ್ಞಾನಭಕ್ತಿವಿರಕ್ತಿ ಮಾರ್ಗವತಿಳಿಸಲೆಂದು ॥ ೨ ॥**

**ತಾತ್ಪರ್ಯ:–** ಅಹಂಕಾರಿಕ ಪ್ರಾಣ ದೇವರಿಗೆ, ನಮಸ್ಕರಿಸುವೆನು. ಮನ್ಮಥನ ಪುತ್ರ ಅನಿರುದ್ಧ, ಮನು, ಗುರು, ದಕ್ಷ, ಶಚಿ, ರತಿ ಇವರಾರು ಮಂದಿಗಳಿಗೆ, ಪ್ರವಹವಾಯುವಿಗೆ, ಸೂರ್ಯ, ಚಂದ್ರ, ಯಮ, ಶತರೂಪೆ ಇವರು ನಾಲ್ವರಿಗೆ, ವರುಣನಿಗೆ, ನಾರದರಿಗೆ, ಜ್ಞಾನ ಭಕ್ತಿ ವಿರಕ್ತಿ ಮಾರ್ಗವನ್ನು ಎನಗೆ ತಿಳಿಸಲೆಂದು ನಮಸ್ಕರಿಸುವೆನು.

**ಅನಲಭೃಗುದಾಕ್ಷಾಯಣಿಯರಿಗೆ**
**ಕನಕಗರ್ಭಜ ಸಪ್ತ ಋಷಿಗಳಿ**
**ಗೆಣೆ ಎನಿಪ ವೈವಸ್ವತನುಮನು ಗಾಧಿಸಂಭವಗೆ ॥**
**ದನುಜ ನಿಋಋತಿ ತಾರಪ್ರಾವಹಿ**
**ವನಜಮಿತ್ರರ್ಗಶ್ವಿನಿಗಣಪ**
**ಧನಪವಿಷ್ವಕ್ಸೇನರಿಗೆ ವಂದಿಸುವೆ ನನವರತ ॥ ೩ ॥**

**ತಾತ್ಪರ್ಯ:–** ಅನಲ=ಅಗ್ನಿ ದೇವರಿಗೆ, ಭೃಗು=ಭೃಗು ಋಷಿಗಳಿಗೆ, ದಾಕ್ಷಾಯಣಿಯಾದ ಪ್ರಸೂತಿ ದೇವಿಯರಿಗೆ, ಬ್ರಹ್ಮ ದೇವರ ಮಕ್ಕಳಾದ ಏಳು ಋಷಿಗಳಿಗೆ, ಇವರಿಗೆ ಸಮರಾದ ವೈವಸ್ವತ ಮನುವಿಗೂ, ವಿಶ್ವಾಮಿತ್ರರಿಗೂ, ರಾಕ್ಷಸನಾದ ನಿಋಋತಿ, ತಾರೆ, ಪ್ರಾವಹಿ, ಮಿತ್ರನೆಂಬ ಸೂರ್ಯ ಇವರುಗಳಿಗೆ ಅಶ್ವಿನೀ, ಗಣಪತಿ, ಕುಬೇರ, ವಿಷ್ವಕ್ಸೇನ ಇವರೆಲ್ಲರಿಗೂ ಸರ್ವದಾ ನಮಿಸುವೆನು.

ಉಕ್ತದೇವರ್ಕಳನುಳಿದು ಎಂ
ಭತ್ತೈದು ಜನರುಗಳು ಮನುಗಳು
ಚಿಥ್ಯಚ್ಯಾವನ ಯಮಳರಿಗೆ ಕರ್ಮಜರೆನಿಸುತಿಪ್ಪ ॥
ಕಾರ್ತಿವೀರ್‍ಯಾರ್ಜುನ ಪ್ರಮುಖ ಶ
ತಸ್ಥರಿಗೆ ಪರ್ಜನ್ಯ ಗಂಗಾ
ದಿತ್ಯಯಮಸೋಮಾನಿರುದ್ಧರ ಪತ್ನಿಯರ ಪದಕೆ ॥ ೪ ॥

**ತಾತ್ಪರ್ಯ:–** ಉಕ್ತಶೇಷಶತಸ್ಥರು, ಉತ್ತಮ ಕಕ್ಷದಲ್ಲಿ ಶೇರಿದವರು ೧೫ ಮಂದಿ ಹೋಗುತ್ತಾ ಉಳಿದ ೮೫ ಜನರು, ಮನುಗಳು, ಉಚಿಥ್ಯರು, ಚಾವನ ಯಮಳರಿಗೆ=ಇಬ್ಬರಿಗೆ, ಕರ್ಮದೇವರೆನಿಸುವ ಕಾರ್ತಿವೀರ್‍ಯಾರ್ಜುನ ಮೊದಲಾದ ಪ್ರಮುಖ=ಮುಖ್ಯರಾದ ಶತಸ್ಥರಿಗೆ ೧೦೦ ಜನರಿಗೆ, ಪರ್ಜನ್ಯನೆಂಬ ಸೂರ್ಯ, ಗಂಗಾ, ಸಂಜ್ಞಾ, ರೋಹಿಣೀ, ಶಾಮಳೆ, ಅನಿರುದ್ಧನ ಹೆಂಡತಿ ಉಷೆ ಇವರುಗಳ ಪಾದಗಳಿಗೆ ನಮಸ್ಕರಿಸುವೆನು.

ಹುತವಹನರ್ಧಾಂಗಿನಿಗೆ ಚಂದ್ರಮ
ಸುತಬುಧನಾಮಾತ್ಮಿಕೋಷಾ
ಸತಿಗೆ ಛಾಯಾತ್ಮಜ ಶನೈಶ್ಚರಗಾನಮಿಪೆ ಸತತ ॥
ಪ್ರತಿದಿವಸದಲಿ ಬಿಡದೆ ಜೀವ
ಪ್ರತತಿ ಮಾಡುವ ಕರ್ಮಗಳಿಗಧಿ
ಪತಿಎನಿಪ ಪುಷ್ಕರನ ಪಾದಾಂಬುಜಗಳಿಗೆ ನಮಿಪೆ ॥ ೫ ॥

**ತಾತ್ಪರ್ಯ:–** ಹುತವಹನ=ಅಗ್ನಿಪುರುಷ ದೇವರು, ಅರ್ಧಾಂಗಿ=ಅವರ ಹೆಂಡತಿ ಸ್ವಾಹಾದೇವಿ, ಬುಧ, ಅಶ್ವಿನೀಭಾರ್‍ಯಾ ಉಷೆ, ಶನೈಶ್ಚರ, ಇವರಿಗೆ ಸರ್ವದಾ ನಮಸ್ಕರಿಸುವೆನು. ಪ್ರತಿ ಜೀವರು ಮಾಡುವ ಕರ್ಮಗಳಿಗಭಿಮಾನಿ ಪುಷ್ಕರನ ಪಾದಾಂಬುಜಗಳಿಗೆ ನಮಸ್ಕರಿಸುವೆನು.

ಆನಮಿಪೆ ಯಾಜಾನಜರಿಗೆ ಕೃ
ಶಾನು ಸುತರಿಗೆ ಗೋವ್ರಜದೊಳಿಹ
ಮಾನಿನಿಯರಿಗೆ ಚಿರಪಿತೃಶತನ್ಯೂನ ಶತಕೋಟಿ ॥
ಮೌನಿಜನರಿಗೆ ದೇವಮಾನವ
ಗಾನಪ್ರೌಢರಿಗವನಿಪರಿಗೆ ರ
ಮಾನಿವಾಸನದಾಸವರ್ಗಕೆ ನಮಿಪೆನನವರತ ॥ ೬ ॥

**ತಾತ್ಪರ್ಯ:–** ಅಜಾನಜ ದೇವತೆಗಳಿಗೆ, ಅಗ್ನಿ ಪುತ್ರರಾದ ೧೬,೧೦೦ ಮಂದಿಯರಿಗೆ, ಕೃಷ್ಣಾಂಗ ಸಂಗ ಹೊಂದಿದ ಗೋಪಿಕಾ ಸ್ತ್ರೀಯರಿಗೆ, ಚಿರಪಿತೃಗಳಿಗೆ ೧೦೦ ಕಮ್ಮಿ ೧೦೦ ಕೋಟಿ ಸಂಖ್ಯಾಕರಾದ ಋಷಿಗಳಿಗೆ, ದೇವಗಂಧರ್ವ, ಮನುಷ್ಯ ಗಂಧರ್ವರಿಗೆ, ಚಕ್ರವರ್ತಿಗಳಿಗೆ, ರಮಾಪತಿಯಾದ ಶ್ರೀ ಪರಮಾತ್ಮನ ದಾಸರಾದ ಮನುಷ್ಯೋತ್ತಮರಿಗೆ ಇವೆರೆಲ್ಲರಿಗೂ ಸರ್ವದಾ ನಮಸ್ಕಾರ ಮಾಡುವೆನು.

ಅನುಕ್ರಮಣಿಕ ತಾರತಮ್ಯವ
ನನುದಿನದಿ ಸದ್ಭಕ್ತಿ ಪೂರ್ವಕ
ನೆನೆವರಿಗೆ ಧರ್ಮಾರ್ಥ ಕಾಮಾದಿಗಳು ಫಲಿಸುವವು ॥
ವನಜಸಂಭವ ಮುಖ್ಯರವಯವ
ರೆನಿಸುವರು ಜಗನ್ನಾಥವಿಟ್ಠಲಗೆ
ವಿನಯದಿಂದಲಿ ನಮಿಸಿಕೊಂಡಾಡುತಿರು ಮರಿಯದಲೆ ॥ ೭ ॥

**ತಾತ್ಪರ್ಯ:–** ಅನುಕ್ರಮಣಿಕಾ ತಾರತಮ್ಯವನ್ನು ಪ್ರತಿ ದಿವಸದಲ್ಲೂ ಪಠಿಸುವವರಿಗೆ ಧರ್ಮಾರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥಗಳು ಸಿದ್ಧಿಸುವವು. ಬ್ರಹ್ಮಾದಿ ದೇವತೆಗಳೆಲ್ಲರೂ ಶ್ರೀಜಗನ್ನಾಥವಿಟ್ಠಲನಿಗೆ ಅಂಗಭೂತರಾಗಿರುವರು. ಆದುದರಿಂದ ಅವರೆಲ್ಲರಿಗೂ ವಿನಯದಿಂದ ನಮಸ್ಕಾರವನ್ನು ಮಾಡಿ ಮರಿಯದೆ ಪ್ರತಿ ದಿವಸದಲ್ಲೂ ಸ್ತುತಿಸುತ್ತಿರು.

**ಅವರೋಹಣ ತಾರತಮ್ಯ ಸಂಧಿ ಎಂಬ ೨೬ನೆಯ ಸಂಧಿಯ ತಾತ್ಪರ್ಯವು ಮುಗಿದುದು.**

**॥ ಶ್ರೀ ಕೃ ಷ್ಣಾ ರ್ಪ ಣ ಮ ಸ್ತು ॥**